Fax: 08282-256262
E-mail:kuvempuacademic@gmail.com

Phone No - 08282-256149
Website:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ - 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಎಸಿ-5: 2589 :2019-20

ದಿನಾಂಕ:04-07-2019

## ಸುತ್ತೋಲೆ

**ವಿಷಯ: 2019-20ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ನಮೂದಿಸುವ ಬಗ್ಗೆ.**

ಉಲ್ಲೇಖ:1. ಸುತ್ತೋಲೆ ಸಂಖ್ಯೆ:ಕುವಿ:ಶೈವಿ:ಎಸಿ-5:572/2019-20, ದಿನಾಂಕ:03-05-2019.
2. ಸುತ್ತೋಲೆ ಸಂಖ್ಯೆ:ಕುವಿ:ಶೈವಿ:ಎಸಿ-5:595/2019-20, ದಿನಾಂಕ:04-05-2019.

****

2017-18ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ನಮೂದಿಸುವ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಅದರಂತೆ 2019-20ನೇ ಶೈಕ್ಷಣಿಕ ಸಾಲಿನಲ್ಲಿಯು ಸಹ ಸ್ನಾತಕ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ನಮೂದಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. 2019-20ನೇ ಸಾಲಿನ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕರ್ನಾಟಕ ಸರ್ಕಾರದ ಪದವಿ ಪೂರ್ವ ಮಂಡಳಿ/ಹೊರರಾಜ್ಯ ಪರೀಕ್ಷಾ ಮಂಡಳಿ ಹಾಗೂ ಸಿ.ಬಿ.ಎಸ್.ಇ.ಯಲ್ಲಿ ಉತ್ತೀರ್ಣರಾಗಿರುವ ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಕಾಲೇಜಿನಲ್ಲಿಯೇ ಪರಿಶೀಲಿಸಿ ದೃಢೀಕರಿಸಿದ ನಂತರ ಈ ಹಿಂದೆ ಪರೀಕ್ಷಾ ವಿಭಾಗದಿಂದ ನೀಡಿದ ಸಾಫ್ಟ್‌ವೇರ್‌ನಲ್ಲಿ ಕೆಲವು ಮಾರ್ಪಾಡುಗಳೊಂದಿಗೆ ತಮ್ಮ ಕಾಲೇಜಿಗೆ ನೀಡಿದ User Name ಬಳಸಿಕೊಂಡು **ದಿನಾಂಕ:<u>20-08-2019</u>ರೊಳಗಾಗಿ ಕಡ್ಡಾಯವಾಗಿ** ಆನ್‌ಲೈನ್ ಮೂಲಕ ಸಾಫ್ಟ್‌ವೇರ್‌ನಲ್ಲಿ ನಮೂದಿಸಲು ಸೂಚಿಸಲಾಗಿದೆ. (ಆನ್‌ಲೈನ್‌ನಲ್ಲಿ ನಮೂದಿಸುವ ವಿಧಾನದ ಬಗ್ಗೆ ಕಳೆದ ಸಾಲಿನಲ್ಲಿ ಕಳುಹಿಸಿರುವ Flow chart ನ್ನು ಗಮನಿಸುವುದು). ವಿದ್ಯಾರ್ಥಿಗಳ ಹೆಸರುಗಳನ್ನು S.S.L.C. / 10ನೇ ತರಗತಿ ಅಂಕಪಟ್ಟಿಯಲ್ಲಿರುವಂತೆದಾಖಲಿಸತಕ್ಕದ್ದು

ಆನ್‌ಲೈನ್ ಮೂಲಕ ದಾಖಲಿಸಲಾದ ವಿದ್ಯಾರ್ಥಿಗಳ ಪಟ್ಟಿಯನ್ನು ಸಾಫ್ಟ್‌ವೇರ್‌ನಿಂದ Download ಮಾಡಿ ಮುದ್ರಿಸಿಕೊಂಡು ವಿದ್ಯಾರ್ಥಿಗಳ ಮೂಲ ಅಂಕಪಟ್ಟಿ ಮತ್ತು ಪ್ರವೇಶ ಶುಲ್ಕಗಳೊಂದಿಗೆ ಉಲ್ಲೇಖಿತ (1)ರ ಅನುಬಂಧಗಳಲ್ಲಿ ಭರ್ತಿ ಮಾಡಿ ಸೂಕ್ತ ಪ್ರವೇಶಾತಿ ದಾಖಲೆಗಳನ್ನು ಪ್ರಾಂಶುಪಾಲರ ದೃಢೀಕರಣ ಮತ್ತು ಶಿಫಾರಸ್ಸಿನೊಂದಿಗೆ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸುವುದು ಸದರಿ ದಾಖಲೆಗಳನ್ನು ಪರಿಶೀಲಿಸಿ Online ಮೂಲಕ ಪ್ರವೇಶಾತಿಯನ್ನು ಅನುಮೋದಿಸಿ ಪರೀಕ್ಷಾ ವಿಭಾಗಕ್ಕೆ ಕಳುಹಿಸಲಾಗುವುದು. ನಂತರ ಪರೀಕ್ಷಾ ವಿಭಾಗದಿಂದ ನೋಂದಣಿ ಸಂಖ್ಯೆಯನ್ನು ನೀಡಲಾಗುವುದು.

Diploma in Commercial Practice ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೇರವಾಗಿ ದ್ವಿತೀಯ ವರ್ಷದ ಬಿ.ಕಾಂ. / ಬಿ.ಬಿ.ಎ. ಪದವಿಗೆ ಪ್ರವೇಶವನ್ನು ಪಡೆದ **ಲ್ಯಾಟರಲ್ ಎಂಟ್ರಿ** ವಿದ್ಯಾರ್ಥಿಗಳು ಹಾಗೂ ಅನ್ಯ ವಿಶ್ವವಿದ್ಯಾಲಯದಿಂದ ವರ್ಗಾವಣೆ ಪಡೆದು **ಮೂರನೇ ಮತ್ತು ಐದನೇ** ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಹಾಗೂ **ಮೂರನೇ ಮತ್ತು ಐದನೇ** ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದ ದಾಖಲಾತಿಗಳನ್ನು ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಎಲ್ಲಾ ವಿವರಗಳನ್ನು ಕಾಲೇಜಿನಲ್ಲಿಯೇ ಪರಿಶೀಲಿಸಿ ದೃಢೀಕರಣವಾದ ನಂತರ ಸೂಕ್ತ ದಾಖಲಾತಿಗಳೊಂದಿಗೆ ಪ್ರಾಂಶುಪಾಲರ ದೃಢೀಕರಣ ಮತ್ತು ಶಿಫಾರಸ್ಸಿನೊಂದಿಗೆ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸುವುದು. ವಿದ್ಯಾರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ಬಗ್ಗೆ ವ್ಯತ್ಯಾಸವಾದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.

ಉಲ್ಲೇಖಿತ (1)ರಲ್ಲಿ ಹೊರಡಿಸಿದ ಸುತ್ತೋಲೆಯಲ್ಲಿ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಸೂಚನೆಗಳನ್ನು ನೀಡಲಾಗಿದೆ. ಸದರಿ ಸುತ್ತೋಲೆಯನ್ನು ಹಾಗೂ ವಿವಿಧ ನಮೂನೆಗಳನ್ನು ವಿಶ್ವವಿದ್ಯಾಲಯದ ಅಂತರ್ ಜಾಲದಲ್ಲಿ (www.kuvempu.ac.in) ಪ್ರಕಟಿಸಿರುವುದನ್ನು ಉಲ್ಲೇಖ (2)ರ ಸುತ್ತೋಲೆಯಲ್ಲಿ ತಮ್ಮ ಗಮನಕ್ಕೆ ತರಲಾಗಿದೆ.

**Helpline No:81830-98136, 81830-98138.**

(ಡಾ. ಧರಣಿ ಕುಮಾರ್ ಪಿ.)
**ಉಪ ಕುಲಸಚಿವ**
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451.
ಶಿವಮೊಗ್ಗ ಜಿಲ್ಲೆ.

ಗೆ,

**ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸ್ನಾತಕ ಪದವಿ ಸಂಯೋಜಿತ / ನೇರ ಆಡಳಿತ / ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.**

ಪ್ರತಿಗಳು:

1. ಎಲ್ಲಾ ನಿಕಾಯಗಳ ಡೀನರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪರೀಕ್ಷಾಂಗ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ರಕ್ಷಣಾ ಕಡತ.
4. ಕಛೇರಿ ಪ್ರತಿ.